**ದಿನಾಂಕಃ 07-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 5(ಎ) (ಬಿ) ಪ್ರತಿವಾದಿಗಳ ಪರ ಶ್ರೀ ಪಿ. ಆರ್ ಕೆ. ವಕೀಲರಿಂದಃ**

ನನ್ನ ತಂದೆ ಲಿಂಗನಗೌಡ. ನನ್ನ ತಂದೆಯವರಿಗೆ 7 ನೇ ಅಣ್ಣ ತಮ್ಮಂದಿರು. ಅವರು ರುದ್ರಗೌಡ , ಗಂಗನಗೌಡ , ಬಸನಗೌಡ , ಶಿವನಗೌಡ , ಶಂಕರಗೌಡ , ಮಹದೇವಗೌಡ , ಲಿಂಗನಗೌಡ , ಚನ್ನಬಸನಗೌಡ , ಮೃತ್ಯುಂಜಯಗೌಡ ಅಂತಾ ಇದ್ದರು. ನನ್ನ ತಂದೆ ಅಣ್ಣ ತಮ್ಮಂದಿರು ಬೇರೆ ಬೇರೆ ಊರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಬಸನಗೌಡ ಗುರುಗೌಡ ಪಾಟೀಲ ನನ್ನ ದೊಡಪ್ಪ ಎಂದರೆ ಸರಿ. ಸದರಿಯವರು ವೈದ್ಯರು ಎಂದರೆ ಸರಿ. ಸದರಿಯವರು ಶಾಸಕರು ಹಾಗೂ ಅಖಂಡ ದಾರವಾಡ ಜಿಲ್ಲೆಯ ಜಿಲ್ಲಾ ಪಂಚಾಯತ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಸದರಿಯವರು ಸಕ್ರಿಯವಾಗಿ ರಾಜಕೀಯವಾಗಿದ್ದರು ಎಂದರೆ ಸರಿ. ನಮ್ಮ ಕುಟುಂಬದವರು ಸಕ್ರಿಯವಾಗಿ ರಾಜಕಾರಣದಲ್ಲಿ ಭಾಗವಹಿಸುತ್ತಿದ್ದೇವು ಎಂದರೆ ಅವರೊಬ್ಬರೇ ರಾಜಕಾರಣದಲ್ಲಿ ಭಾಗವಹಿಸುತ್ತಿದ್ದರು ಎಂದು ನುಡಿಯುತ್ತಾರೆ. ಎಮ್ ಜಿ ಪಾಟೀಲ ರವರು ಸಂಘ ಸಂಸ್ಥೆಗಳ ಅಧ್ಯಕ್ಷರು ಆಗಿದ್ದರು ಆಗ ಇದ್ದರು ಈಗ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರು ಬಿ ಎ ಜೆ ಎಸ್ ಎಸ್ ನ ಕಾರ್ಯದರ್ಶಿ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಜನರಲ್ ವರ್ಕರ್ಸ ಹೌಸಿಂಗ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಜಗನ್ನಾಥ ಪಾಟೀಲ ರವರು ರಾಣೇಬೆನ್ನೂರು ತಾಲುಕ್ಕಿನ ಬಿಜೆಪಿಯ ಅಧ್ಯಕ್ಷರು ಆಗಿದ್ದರು ಎಂದರೆ ಸರಿಯಲ್ಲ ಬೀಜಗಳ ವ್ಯಾಪಾರ ಮಾಡುತ್ತಾರೆ. ಮೃತ್ಯುಂಜಯ ಪಾಟೀಲ ರವರು ಬೀಜದ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ಮನೆತನಕ್ಕೆ ಸಂಬಂದಪಟ್ಟಂತೆ ಜಿನ್ನಿಂಗ್ ಕಾರ್ಖಾನೆಗಳು ಇವೆ ಎಂದರೆ ಸರಿ. ಸಮಾಜದಲ್ಲಿ ಒಳ್ಳೆಯ ಹಿಡಿತ ಇಲ್ಲ ಒಳ್ಳೆಯ ಸ್ಥಾನ ಮಾನ ಇತ್ತು ಎಂದು ನುಡಿಯುತ್ತಾರೆ. ನಮ್ಮ ಮನೆತನಕ್ಕೆ ಒಳ್ಳೆಯ ಹೆಸರು ಇದ್ದಿದ್ದರಿಂದ ಬಿ ಜಿ ಪಾಟೀಲ ರವರು ಶಾಸಕರಾಗಿದ್ದರು ಎಂದರೆ ಜನರ ಆಶೀರ್ವಾದ ಇತ್ತು ಎಂದು ನುಡಿಯುತ್ತಾರೆ. ವಾದಿ ಕುಟುಂಬದವರು ನಮ್ಮ ಸಂಬಂಧಿಕರು ಎಂದರೆ ಸರಿ. ನಮಗೂ ಹಾಗೂ ಅವರ ಮಧ್ಯ ಒಳ್ಳೆಯ ಬಾಂದವ್ಯ ಇತ್ತು ಎಂದರೆ ಸರಿ. ವಾದಿ ಕುಟುಂಬದವರು ನಮ್ಮ ಹಾಗೂ ಅವರ ಕುಟುಂಬದ ಸದಸ್ಯರ ಮೇಲೆ ಒಳ್ಳೆಯ ವಿಶ್ವಾಸ ಹೊಂದಿದ್ದರು ಎಂದರೆ ಸರಿಯಲ್ಲ. ವಾದಿಯರು ಆರ್ಥಿಕವಾಗಿ ದುರ್ಬಲರಾಗಿದ್ದು ಅವಿದ್ಯಾವಂತರಾಗಿದ್ದರು ಎಂದರೆ ಆರ್ಥಿಕವಾಗಿ ದುರ್ಬಲರಾಗಿದ್ದರು ಅವಿದ್ಯಾವಂತರಾಗಿರಲಿಲ್ಲ ಎಂದು ನುಡಿಯುತ್ತಾರೆ. ಸಿದ್ದಪ್ಪನಿಗೆ ಸಹಿ ಮಾಡಲು ಬರುತ್ತಿತ್ತು. ಸಿದ್ದಪ್ಪ ಎಲ್ಲಿಯವರೆಗೆ ಒದಿದ್ದರು ಎಂದು ನನಗೆ ಮಾಹಿತಿ ಇಲ್ಲ. ಅವರ ಮಗ ರೇವಣಪ್ಪ ಎಲ್ಲಿಯವರೆಗೆ ಒದಿದ್ದ ಎಂದು ನನಗೆ ಗೊತ್ತಿಲ್ಲ ಅವರು ಸಹಿ ಮಾಡುತ್ತಾರೆ. ಅವರ 2 ನೇ ಮಗ ಸಿದ್ದಬಸಪ್ಪ ಎಲ್ಲಿಯವರೆಗೆ ಒದಿದ್ದ ಎಂದು ನನಗೆ ಗೊತ್ತಿಲ್ಲ ಸಹಿ

ಮಾಡುತ್ತಾರೆ. ಅವರಿಗೆ ಒಕ್ಕಲುತನ ಬಿಟ್ಟರೇ ಬೇರೆ ಯಾವ ಉದ್ಯೋಗ ಇರಲಿಲ್ಲ ಎಂದರೆ ಸರಿ. ದಿನಾಂಕ 03.12.1936 ರಂದು ಸಿದ್ದಪ್ಪ ದಾನಪ್ಪ ನವರು ಇವರು ಗುರುನಗೌಡ ಪಾಟೀಲ ರವರ ಹೆಸರಿನಲ್ಲಿ ದಾವಾ ಆಸ್ತಿ ಕುಟುಂಬದ ಆಸ್ತಿಗಳಿಗೆ ಸಂಬಂದಪಟ್ಟಂತೆ ಖರೀದಿ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿ. ನಂತರ ದಿನಾಂಕ 26.04.1963 ರಂದು ಸದರಿ ಖರೀದಿ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿ. ಪ್ರತಿವಾದಿ ಪರ ವಕೀಲರು ಸದರಿ ಖರೀದಿ ಪತ್ರ ವಿಷಯಗಳನ್ನು ಸಾಕ್ಷಿಗೆ ಒದಿ ಹೇಳಲಾಗಿ ಸಾಕ್ಷಿ ಬೇನಾಮಿ ಅನ್ನುವುದು ಸರಿಯಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರಕ್ಕೆ ಸಿದ್ದಪ್ಪ ರೇವಣಪ್ಪ ದಾನಪ್ಪನವರ ,ರುದ್ರಗೌಡ ಗುರುನಗೌಡ ಪಾಟೀಲ ರವರು ಸಹಿ ಹಾಕಿರುತ್ತಾರೆ ಎಂದರೆ ಸರಿ. ಸದರಿ ಪತ್ರದ ಆಧಾರದ ಮೇಲೆ ದಾಖಲೆಗಳು ಆಗಿವೆ ಎಂದರೆ ಸರಿ.

**ಈ ಹಂತದಲ್ಲಿ ಪಾಟೀ ಸವಾಲಿಗೆ ಸಮಯ ಬೇಡಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.